**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,**
ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು-560009

ಸಂಖ್ಯೆ: ಕೆಪಿಆರ್‌ಸಿ/ಜಿಪಿಎ/657/2023 ದಿನಾಂಕ:15.12.2023

**ಅಧಿಕೃತ ಜ್ಞಾಪನ ಪತ್ರ**

**ವಿಷಯ:** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಜಿಲ್ಲೆಯಲ್ಲಿ 2023-24ನೇ ಸಾಲಿನ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಆಯ್ಕೆಯಾಗಿರುವ ಧಾರವಾಡ ಜಿಲ್ಲೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ನಿಯೋಜಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/301/ಜಿಪಸ/2017, ದಿನಾಂಕ: 17.10.2017.
2. ಧಾರವಾಡ ಜಿಲ್ಲಾ ಪಂಚಾಯತಿ ಪತ್ರ ಸಂಖ್ಯೆ:ಧಾಜಿಪಂ:ಉಕಾ/ಸಿ-10/2023-24/2050, ದಿನಾಂಕ:05.12.2023.
3. ಧಾರವಾಡ ಜಿಲ್ಲಾ ಪಂಚಾಯತಿ ಪತ್ರ ಸಂಖ್ಯೆ:ಧಾಜಿಪಂ:ಉಕಾ/ಸಿ-10/2023-24/1328, ದಿನಾಂಕ:16.09.2023.

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರಲ್ಲಿ ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವರು ಧಾರವಾಡ ಜಿಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ವಿಶ್ವವಿದ್ಯಾಲಯದ ವಿವಿಧ ಪ್ರೋಗ್ರಾಮ್‌ಗಳಿಗೆ, ಅಧ್ಯಯನ ಮಾಡಲು ಆಯ್ಕೆಯಾಗಿರುವುದಾಗಿ ತಿಳಿಸಿರುತ್ತಾರೆ.

| ಕ್ರಮ.ಸಂ | ಹೆಸರು/ಹುದ್ದೆ | ಉನ್ನತ ವ್ಯಾಸಾಂಗಕ್ಕೆ ಆಯ್ಕೆಗೊಂಡಿರುವ ವಿಷಯ |
|---|---|---|
| 1 | ಶ್ರೀ ವಿಠ್ಠಲ ಕಲಗೌಡರ, ಗಂಭ್ಯಾಪುರ ಗ್ರಾ.ಪಂ, ನಿಯೋಜನೆ ಗು ಹುಲಿಕಟ್ಟಿ ಗ್ರಾ.ಪಂ, ಕಲಘಟಗಿ ತಾಲ್ಲೂಕು | ಗ್ರಾಮೀಣಾಭಿವೃದ್ಧಿ(ಪಂಚಾಯತ್ ರಾಜ್/ಸಹಕಾರ ನಿರ್ವಹಣೆ) |
| 2 | ಶ್ರೀ ಚನಬಸಪ್ಪ ಗ ದ್ಯಾಮಾಪುರ, ಬೀರವಳ್ಳಿ ಗ್ರಾ.ಪಂ, ನಿಯೋಜನೆ ಸೂಳಿಕಟ್ಟೆ ಗ್ರಾ.ಪಂ. ಕಲಘಟಗಿ ತಾಲ್ಲೂಕು. | ಸಾರ್ವಜನಿಕ ಆಡಳಿತ |
| 3 | ಶ್ರೀ ಪ್ರದೀಪ ಚಾಲುಕ್ಯ, ತುಪ್ಪದಕುರಹಟ್ಟಿ ಗ್ರಾ.ಪಂ., ನಿಯೋಜನೆ ಭದ್ರಾಪೂರ ಗ್ರಾ.ಪಂ ಅಣ್ಣಿಗೇರಿ ತಾಲ್ಲೂಕು. | ಅರ್ಥಶಾಸ್ತ್ರ |

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಷರತ್ತು ಮತ್ತು ನಿಬಂಧನೆಗಳನ್ನು ಈ ಮೇಲೆ ತಿಳಿಸಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪೂರೈಸಿರುತ್ತಾರೆ ಎಂದು ಧಾರವಾಡ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ಉಲ್ಲೇಖ(3)ರ ಪತ್ರದಲ್ಲಿ ತಿಳಿಸಿರುತ್ತಾರೆ. ಮುಂದುವರೆದು, ಸದರಿ ನೌಕರರು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿ 1957 ರ ನಮೂನೆ 19 ರಂತೆ ಬಂಧಪತ್ರ ಸಲ್ಲಿಸಿರುತ್ತಾರೆ.

ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿ 1957ರ ನಿಯಮ 61 ರನ್ವಯ ಮತ್ತು ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಸರ್ಕಾರಿ ನೌಕರರಿಗೆ ಉನ್ನತ ವ್ಯಾಸಂಗಗಳಿಗೆ/ವಿಶಿಷ್ಟ ತರಬೇತಿ ಶಿಕ್ಷಣಕ್ಕೆ ನಿಯೋಜಿಸಲು ಅವಕಾಶವಿದ್ದು, ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳು ಮತ್ತು ಉಲ್ಲೇಖ (1) ಸರ್ಕಾರದ ಆದೇಶದಲ್ಲಿದ್ದಂತೆ ಸದರಿ ನೌಕರರು ನಮೂನೆ 19 ರಲ್ಲಿ ಬಂಧಪತ್ರವನ್ನು ನೀಡಿರುವುದರಿಂದ, ಸದರಿ ನೌಕರರನ್ನು ಉನ್ನತ ವ್ಯಾಸಂಗದ ಮೇಲೆ ತೆರಳಲು ಪ್ರತಿ ನಿಯೋಜಿಸಲು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಕೆಪಿಆರ್‌ಸಿ/ಜಿಪಿಎ/657/2023, ದಿನಾಂಕ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ 2023-24ನೇ ಸಾಲಿನ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಈ ಕೆಳಕಂಡ ಧಾರವಾಡ ಜಿಲ್ಲೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಆಯ್ಕೆಯಾಗಿರುವುದರಿಂದ, ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವುದರಿಂದ ಮತ್ತು ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಗಳ ಅನುಬಂಧ 19 ರಂತೆ ಬಂಧಪತ್ರ ನೀಡಿರುವುದರಿಂದ, ಸದರಿ ನಿಯಮಾವಳಿಗಳಲ್ಲಿನ ಷರತ್ತುಗಳಿಗೊಳಪಟ್ಟು ಉನ್ನತ ವ್ಯಾಸಂಗದ ಮೇಲೆ ತೆರಳಲು ಪ್ರತಿ ನಿಯೋಜಿಸಿ ಆದೇಶಿಸಿದೆ.

| ಕ್ರಮ.ಸಂ | ಹೆಸರು/ಹುದ್ದೆ | ಉನ್ನತ ವ್ಯಾಸಾಂಗಕ್ಕೆ ಆಯ್ಕೆಗೊಂಡಿರುವ ವಿಷಯ |
|---|---|---|
| 1 | ಶ್ರೀ ವಿಠ್ಠಲ ಕಲಗೌಡರ,<br>ಗಂಬ್ಯಾಪುರ ಗ್ರಾ.ಪಂ,<br>ನಿಯೋಜನೆ ಗು ಹುಲಿಕಟ್ಟಿ ಗ್ರಾ.ಪಂ,<br>ಕಲಘಟಗಿ ತಾಲ್ಲೂಕು | ಗ್ರಾಮೀಣಾಭಿವೃದ್ಧಿ(ಪಂಚಾಯತ್ ರಾಜ್/ಸಹಕಾರ ನಿರ್ವಹಣೆ) |
| 2 | ಶ್ರೀ ಚನಬಸಪ್ಪ ಗ ದ್ಯಾಮಾಪುರ,<br>ಬೀರವಳ್ಳಿ ಗ್ರಾ.ಪಂ,<br>ನಿಯೋಜನೆ ಸೂಳಿಕಟ್ಟಿ ಗ್ರಾ.ಪಂ.<br>ಕಲಘಟಗಿ ತಾಲ್ಲೂಕು. | ಸಾರ್ವಜನಿಕ ಆಡಳಿತ |
| 3 | ಶ್ರೀ ಪ್ರದೀಪ ಚಾಲುಕ್ಯ,<br>ತುಪ್ಪದಕುರಹಟ್ಟಿ ಗ್ರಾ.ಪಂ.,<br>ನಿಯೋಜನೆ ಭದ್ರಾಪೂರ ಗ್ರಾ.ಪಂ<br>ಅಣ್ಣಿಗೇರಿ ತಾಲ್ಲೂಕು. | ಅರ್ಥಶಾಸ್ತ್ರ |

ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

15/12/23

ಪ್ರತಿಯನ್ನು,

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವಿಕಾಸ ಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು(ಪಂ. ರಾಜ್), ಗ್ರಾ.ಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಇವರ ಆಪ್ತ ಸಹಾಯಕರ ಮಾಹಿತಿಗಾಗಿ.

5. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತಿ, ರವರಿಗೆ ಸದರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಬಿಡುಗಡೆಗೊಳಿಸಿ ನಿಯಮಾನುಸಾರ ಕ್ರಮ ವಹಿಸಲು.
6. ಕುಲಸಚಿವರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಜಿಲ್ಲೆ
7. ಕಾರ್ಯನಿರ್ವಾಹಕ ಅಧಿಕಾರಿ, ಕಲಘಟಗಿ ತಾಲ್ಲೂಕು ಮತ್ತು ಅಣ್ಣಿಗೇರಿ ತಾಲ್ಲೂಕು ಧಾರವಾಡ ಜಿಲ್ಲೆ.
8. ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.
9. ವೆಬ್‌ಸೈಟ್,/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.